ಅದನ್ನು ಟ್ರೇಲರ್ ಎನ್ನುವುದಾದರೆ, ಜೈಪುರದಲ್ಲಿ ಗುಜರಾತ್ ಟೈಟಾನ್ಸ್ (ಜಿಟಿ) ತಂಡದ ವಿರುದ್ಧ ಹೊಡೆದ 38 ಎಸೆತಗಳ ಶತಕವನ್ನು ಪೂರ್ಣಪ್ರಮಾಣದ ಚಲನಚಿತ್ರ ಎನ್ನಲು ಅಡ್ಡಿಯಿಲ್ಲ. ಅನುಭವಿ ಇಶಾಂತ್ ಶರ್ಮ ಹಾಕಿದ ಓವರ್ ಒಂದರಲ್ಲಿ 28 ರನ್‌ಗಳನ್ನು ಸೇರಿಸಿದಾಗಲೇ ಹುಡುಗನ ಇರಾದೆ ಸ್ಪಷ್ಟವಾಯಿತು. 17 ಎಸೆತಗಳಲ್ಲಿ 50 ರನ್ ಗಳಿಕೆಯೂ ಸಾಧ್ಯವಾಯಿತು. ಮುಂದಿನ 21 ಎಸೆತಗಳಲ್ಲಿ ಮತ್ತೂ ಐವತ್ತು ರನ್‌ಗಳ ಗಡಿ ದಾಟಿದ್ದು ಹುಡುಗನ ಕ್ಷಮತೆಗೆ ಕನ್ನಡಿ ಹಿಡಿಯಿತು. ಅಫ್ಘಾನಿಸ್ತಾನದ ಯುವ ವೇಗದ ಬೌಲರ್ ಕರೀಮ್ ಜನತ್ ಹಾಕಿದ ಒಂದೇ ಓವರ್‌ನಲ್ಲಿ ಮೂರು ಸಿಕ್ಸರ್, ಮೂರು ಬೌಂಡರಿ ಹೊಡೆದದ್ದು ಆಕ್ರಮಣದ ಕುದಿಬಿಂದು.

## ಬೇಬಿ ಬಾಸ್

ಈ ಹುಡುಗನನ್ನು 'ಬೇಬಿ ಬಾಸ್' ಎಂದ ಗುಣವಿಶೇಷಣದಿಂದ ಕೆಲವರು ಕರೆಯಲಾರಂಭಿಸಿದ್ದಾರೆ. ಚುಟುಕು ಕ್ರಿಕೆಟ್‌ನಲ್ಲಿ ಇಂತಹ ಉತ್ಪ್ರೇಕ್ಷೆಯ ಬಣ್ಣನೆಗಳು ಹೊಮ್ಮುವುದು ಹೊಸತೇನೂ ಅಲ್ಲ. ಕ್ರಿಸ್ ಗೇಲ್ 2013ರಲ್ಲಿ ಅತಿ ವೇಗದ ಶತಕ ಗಳಿಸಿದ್ದಾಗ ಐಪಿಎಲ್ ಬ್ಯಾಟಿಂಗ್ ಯಾವ ಮಟ್ಟಕ್ಕೆ ಹೋದೀತೆಂಬ ಅಂದಾಜು ಸಿಕ್ಕಿತ್ತು. ಅವರ ನಂತರದ ಸ್ಥಾನ ವೇಗವಾಗಿ ವೈಭವ್ ಗಳಿಸಿರುವ ಶತಕಕ್ಕೆ ಸಿಕ್ಕಿದೆ.

ಬಿಹಾರದ ಪುಟಾಣಿ ಏಳೆಂಟು ವರ್ಷಗಳ ಹಿಂದೆ ಐಪಿಎಲ್ ಕ್ರಿಕೆಟ್ ನೋಡಲು ತಂದೆಯ ಭುಜ ಏರಿ ಕುಳಿತ ಚಿತ್ರವನ್ನು ನೋಡಿದವರು, 'ಈಗ ಕಾಲ ಎಷ್ಟು ಬೇಗ ಬದಲಾಗುತ್ತದೆ' ಎಂದು ಬಣ್ಣಿಸುತ್ತಿರುವುದು ಈ ಬೆಳವಣಿಗೆಯ ಇನ್ನೊಂದು ಗಮನಾರ್ಹ ಪರಿಣಾಮ.

ವೈಭವ್ ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟಿದ್ದು ಕಳೆದ ವರ್ಷ. ಬಿಹಾರದ ಪರವಾಗಿ ರಣಜಿ ಪಂದ್ಯ ಆಡಲು ಆಯ್ಕೆಯಾದಾಗ ಅವನ ವಯಸ್ಸು 12 ವರ್ಷ 284 ದಿನ. 1942–43ರಲ್ಲಿ ಅಲೀಮುದ್ದೀನ್ ಎಂಬ ಕ್ರಿಕೆಟಿಗ ತನಗೆ 12 ವರ್ಷ 74 ದಿನ ತುಂಬಿದ್ದಾಗ ಆಗಿನ 'ರಜಪೂತಾನಾ' ತಂಡದ ಪರವಾಗಿ ಆಡಿದ್ದ. ಇದುವರೆಗೆ ರಣಜಿ ಕ್ರಿಕೆಟ್ ಇತಿಹಾಸದಲ್ಲಿಯೇ ಆಡಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ಆತನ ಹೆಸರಿನಲ್ಲಿ ಇದೆ. ಆ ಯಾದಿಯಲ್ಲಿ ನಂತರದ ಸ್ಥಾನ ವೈಭವ್‌ನದ್ದು.

## ಐದೇ ಪ್ರಥಮ ದರ್ಜೆ ಪಂದ್ಯ

ಇದುವರೆಗೆ ಇವನು ಆಡಿರುವುದು ಕೇವಲ ಐದು ಪ್ರಥಮ ದರ್ಜೆ ಪಂದ್ಯಗಳನ್ನು. ಹತ್ತರ ಸರಾಸರಿಯಲ್ಲಿ ಬರೀ 100 ರನ್‌ಗಳು ಹೆಸರಿನಲ್ಲಿವೆ. ಆದರೆ, 'ಲಿಸ್ಟ್ ಎ' ಪಂದ್ಯಗಳಲ್ಲಿ ಆರು ಪಂದ್ಯಗಳಲ್ಲಿ 132 ರನ್‌ಗಳನ್ನು ಕಲೆಹಾಕಿದ್ದಾನೆ. ಅದರಲ್ಲಿ ಅತಿ ಹೆಚ್ಚು ಸ್ಕೋರ್ 71.

ಆಸ್ಟ್ರೇಲಿಯಾ ಎದುರು 19 ವರ್ಷದೊಳಗಿನವರ ಕ್ರಿಕೆಟ್ ಪಂದ್ಯವೊಂದರಲ್ಲಿ ಭಾರತ ತಂಡವನ್ನು ವೈಭವ್ ಪ್ರತಿನಿಧಿಸಿದ್ದ. ಆ ಪಂದ್ಯದಲ್ಲಿ 58 ಎಸೆತಗಳಲ್ಲಿ ಶತಕ ಗಳಿಸಿದ್ದು ರಾಜಸ್ಥಾನ ರಾಯಲ್ಸ್ ತಂಡದ ಚಿಂತಕರ ಚಾವಡಿಯ ಕಣ್ಣು ಈತನ ಮೇಲೆ ಬೀಳುವಂತೆ ಮಾಡಿತ್ತು. ಕಳೆದ ವರ್ಷ ನಡೆದ 19 ವರ್ಷದೊಳಗಿನವರ ಎಸಿಸಿ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ 44ರ ಸರಾಸರಿಯಲ್ಲಿ 176 ರನ್‌ಗಳನ್ನು ಜಮೆ ಮಾಡಿದ್ದ. ರಣಧೀರ್ ವರ್ಮಾ ಟೂರ್ನಿಯ ಪಂದ್ಯವೊಂದರಲ್ಲಿ 332 ರನ್ ಗಳಿಸಿ ತ್ರಿಶತಕ ಗಳಿಸಿದ ಸಾಧನೆಯನ್ನೂ ಮೆರೆದಿದ್ದ.

## ಮಗನಿಗಾಗಿ ಜಮೀನು ಮಾರಿದ ತಂದೆ

ನಾಲ್ಕನೇ ವಯಸ್ಸಿನಿಂದಲೇ ಈ ಹುಡುಗ ಕ್ರಿಕೆಟ್ ಆಡಲು ಶುರುಮಾಡಿದ. ತಂದೆ ಸಂಜೀವ್ ಅವನ ಮೊದಲ ಗುರು. ಕ್ರಿಕೆಟ್ಟನ್ನು ಹಾಸಿ–ಹೊದೆಯುವ ಮನಃಸ್ಥಿತಿಯ ಅಪ್ಪ ತಮ್ಮ ಎಲ್ಲ ಕನಸುಗಳನ್ನು ಮಗನಿಗೆ ವರ್ಗಾಯಿಸಿದರು. ಭುಜದ ಮೇಲೆ ಹೊತ್ತುಕೊಂಡು ಐಪಿಎಲ್ ಕ್ರಿಕೆಟ್ ತೋರಿಸಿದ್ದಷ್ಟೇ ಅಲ್ಲ, ಕ್ರಿಕೆಟ್‌ನ ಮೂಲಪಾಠಗಳನ್ನೂ ಕಲಿಸಿದರು.

ಶುಭಮನ್ ಗಿಲ್ 2021–22ರಲ್ಲಿ ಬ್ರಿಸ್ಬೇನ್ ಕ್ರಿಕೆಟ್ ಮೈದಾನದಲ್ಲಿ ನಿರ್ಭೀತಿಯಿಂದ ಆಡಿ 91 ರನ್ ಗಳಿಸಿದ್ದ ಇನಿಂಗ್ಸ್ ಬಹುತೇಕರಿಗೆ ನೆನಪಿರಲಿಕ್ಕೆ ಸಾಕು. ಆ ಆಟವನ್ನು ನೋಡಿದಾಗ ಒಂದು ಸುದ್ದಿ ಪ್ರಕಟವಾಯಿತು. ಸಿಮೆಂಟ್ ಪಿಚ್ ನಿರ್ಮಿಸಿ, ಅದರಲ್ಲಿ ಮಗನಿಗೆ ಆಡಲು ಶುಭಮನ್ ತಂದೆ ಲಖ್ವಿಂದರ್ ಸಿಂಗ್ ತರಬೇತಿ ನೀಡಿದ್ದ ಸಂಗತಿ ಆ ಸುದ್ದಿಯಲ್ಲಿತ್ತು. ಅದರಿಂದ ಸಂಜೀವ್ ಕೂಡ ಪ್ರೇರೇಪಿತರಾದರು. ಮನೆಯ ಹಿತ್ತಲಿನಲ್ಲಿ ಒಂದು ಸಿಮೆಂಟ್ ಪಿಚ್ ನಿರ್ಮಿಸಿದರು. ಅಕಾಡೆಮಿಯ ಕಲಿಕೆಯ ಜೊತೆಗೇ ಅಲ್ಲಿ ಮಗನಿಗೆ ಖಾಸಗಿ ಕಲಿಕೆ ಸಾಧ್ಯವಾಗಿಸಿದರು. ಅಷ್ಟೇಕೆ, ಮಗನ ಕ್ರಿಕೆಟ್ ಕಲಿಕೆಗೆ ಆಗುವ ಖರ್ಚು ಭರಿಸಲು ನಾಲ್ಕು ವರ್ಷಗಳ ಹಿಂದೆ ಕೃಷಿ ಭೂಮಿಯನ್ನೇ ಮಾರಿಬಿಟ್ಟರು.

ಹತ್ತು ಡಬ್ಬಿ ಕಟ್ಟಿಸಿಕೊಂಡು ಪಥ್ಯಾಹಾರ ಮುಕ್ಕಾಗದಂತೆ ನೋಡಿಕೊಂಡಿದ್ದು, ಕ್ರಿಕೆಟ್ ಪ್ರೀತಿ ಹಾಗೂ ಪುತ್ರಪ್ರೇಮದ ಅಪೂರ್ವ ಬೆಸುಗೆ.

## ಲಕ್ಷ್ಮಣ್ ಹೆಕ್ಕಿದ ಪ್ರತಿಭೆ

ಸಮಷ್ಟಿಪುರ ಜಿಲ್ಲೆಯ ಮೋತಿಪುರ ಎಂಬ ಹಳ್ಳಿಯ ಹುಡುಗ ವೈಭವ್. ಕ್ರಿಕೆಟ್‌ನಲ್ಲಿ ಕಡಿಮೆ ಸಮಯ ಅಂಬೆಗಾಲಿಟ್ಟ ಇವನು, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ (ಎನ್‌ಸಿಎ) ವಿವಿಎಸ್ ಲಕ್ಷ್ಮಣ್ ಕಣ್ಣಿಗೆ ಬಿದ್ದ. ಆರ್‌ಆರ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಈ ಹುಡುಗನನ್ನು ತಂಡಕ್ಕೆ ಸೇರಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂದು ಶಿಫಾರಸು ಮಾಡಿದ್ದು ಲಕ್ಷ್ಮಣ್. ಅಲ್ಲಿಂದ ರಾಹುಲ್ ದ್ರಾವಿಡ್ ಶಿಷ್ಯನಾಗಿ ಹುಡುಗ ಬೆಳೆಯತೊಡಗಿದ. ಫಲ ಕಣ್ಣೆದುರಲ್ಲೇ ಇದೆ.

ಲಕ್ಷ್ಮಣ್ ದಾಳಿಯನ್ನು ಹದವರಿತಂತೆ ಬೆರೆಸಿ, ರಕ್ಷಣಾತ್ಮಕ ಆಟಕ್ಕೆ ಹೆಸರಾಗಿದ್ದವರು. ದ್ರಾವಿಡ್ ಟೆಸ್ಟ್ ಕ್ರಿಕೆಟ್‌ನಲ್ಲಿ ಗೋಡೆ ಎಂದೇ ಖ್ಯಾತಿ ಗಳಿಸಿದ್ದವರು. ಈ ಪ್ರಭೇದಕ್ಕೆ ಸಂಪೂರ್ಣ ಭಿನ್ನವೇ ಆದ ವೈಭವ್ ಆಟದ ಶೈಲಿಯನ್ನು ದ್ರಾವಿಡ್ ಈ ಬಗೆಯಲ್ಲಿ ನೀರೆರೆದಿರುವುದು ಬದಲಾದ ಕಾಲಕ್ಕೆ ಅವರು ಸ್ಪಂದಿಸಿರುವುದಕ್ಕೆ ಸಾಕ್ಷಿ.

ವೆಸ್ಟ್‌ಇಂಡೀಸ್‌ನ ಬ್ರಿಯಾನ್ ಲಾರಾ ಆಡುತ್ತಿದ್ದಾಗ ಅವರ ಪಾದಚಲನೆಯ 'ಸರಕ್' ಎಂಬ ಸದ್ದು ವಿಕೆಟ್ ಹಿಂದೆ ಅಡಗಿಸಿದ್ದ ಮೈಕ್ರೊಫೋನ್ ಮೂಲಕ ಕೇಳುತ್ತಿತ್ತು. ವೈಭವ್ ಚೆಂಡನ್ನು ಅಂದಾಜು ಮಾಡುವಾಗ ಮಾಡುವ ಕದಲಿಕೆಗಳು ಕೂಡ ಅದನ್ನು ನೆನಪಿಸುವಂತಿವೆ. ಅವರ ಬ್ಯಾಟ್‌ನಿಂದ ಚೆಂಡು 'ಕ್ಲೀನ್ ಹಿಟ್' ಆದಾಗ ಕೇಳುವ ಸದ್ದು ಕ್ರಿಕೆಟ್ ಪ್ರೇಮಿಗಳಲ್ಲಿ ಪುಳಕ ಮೂಡಿಸುತ್ತದೆ. ಇದನ್ನೇ ಗಮನಿಸಿ ಸಚಿನ್ ತೆಂಡೂಲ್ಕರ್, 'ವೈಭವ್ ನಿರ್ಭೀತಿಯಿಂದ ಆಡುತ್ತಾನೆ. ಅವನು ಚೆಂಡನ್ನು ಬಹಳ ಬೇಗ ಅಂದಾಜು ಮಾಡಿ ಹೊಡೆಯುತ್ತಾನೆ. ಬ್ಯಾಟ್ ಚಲನೆಯ ವೇಗವೂ ಅದ್ಭುತ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿರುವುದು ದೊಡ್ಡ ಸರ್ಟಿಫಿಕೇಟ್ ಸಿಕ್ಕಂತಾಗಿದೆ.

ಇವೆಲ್ಲವೂ ಪುಟ್ಟ ಹುಡುಗನ ಸುತ್ತ ಧುತ್ತನೆ ಒಂದು ಪ್ರಭಾವಳಿ ಮೂಡಲು ಕಾರಣವಾಗಿವೆ. ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ₹10 ಲಕ್ಷ ಬಹುಮಾನ ಘೋಷಿಸಿರುವುದು ಪುಟ್ಟ ಹುಡುಗರ ಕಣ್ಣುಗಳೆಲ್ಲ ಅರಳಲು



ಕಾರಣವಾಗಿರಬಹುದು. ಇಂತಹ ಹೊತ್ತಿನಲ್ಲಿ ಭಾರತದ ಮಾಜಿ ಬ್ಯಾಟ್ಸ್‌ಮನ್ ಡಬ್ಲ್ಯು.ವಿ. ರಾಮನ್ ಒಂದು ಅರ್ಥಪೂರ್ಣ ಸಂಗತಿ ಹೇಳಿದ್ದಾರೆ. ಕೇಳಿಸಿಕೊಳ್ಳೋಣ: 'ಇವನಿನ್ನೂ ಬಾಲಕ. ಅವರ ಪೋಷಕರು ಈಗ ಭೂಮಿಯ ಮೇಲೆ ನಿಂತಿರಬೇಕು. ಅವರನ್ನು ಯಾವುದೋ ಒಂದು ಏಜೆನ್ಸಿ ಹುಡುಕಿಕೊಂಡು ಬರಬಹುದು. ಮುಂದಿನ ಐದಾರು ವರ್ಷಗಳಲ್ಲಿ ₹20 ಕೋಟಿ ನೀಡಿ, ಅವನ ಕ್ರಿಕೆಟ್ ಬೆಳೆಸುವುದಾಗಿ ಹೊಣೆ ಹೊತ್ತುಕೊಳ್ಳಬಹುದು. ಅದಾಗಿ ಕೆಲವೇ ದಿನಗಳಾದ ನಂತರ ಇನ್ಯಾವುದೋ ಏಜೆನ್ಸಿ ದುಪ್ಪಟ್ಟು ಹಣ ನೀಡುವ ಆಮಿಷವನ್ನೂ ಒಡ್ಡಬಹುದು. ಅವೆಲ್ಲವುಗಳನ್ನು ಮೀರುವ ಸವಾಲು ಈಗ ವೈಭವ್ ಪೋಷಕರ ಎದುರಲ್ಲಿದೆ. ರಾಹುಲ್ ದ್ರಾವಿಡ್ ಐಪಿಎಲ್ ನಡೆಯುವಾಗಲಷ್ಟೇ ಕೋಚ್. ಆನಂತರ ಈ ಹುಡುಗ ಮುಕ್ತ. ಎನ್‌ಸಿಎಗೆ ಹೋಗಿ, ಅಲ್ಲಿ ಸರಿಯಾದ ತರಬೇತಿ ಪಡೆದುಕೊಳ್ಳಬೇಕು. ಬೆಳೆಯಲು ಬೇಕಾದ ಪೋಷಕಾಂಶ ದೊರಕಿಸಿಕೊಡಬೇಕು.'

ಚುಟುಕು ಕ್ರಿಕೆಟ್‌ನಲ್ಲಿ ತಾರೆಗಳು ಆಗೀಗ ಹೊಳೆಯುತ್ತಲೇ ಇರುತ್ತವೆ. ಕೆಲವು ಉಲ್ಕಾಪಾತಗಳೂ ಆಗಿವೆ. ಈ ತಾರೆ ಅಂತಹ ಉಲ್ಕೆ ಆಗದಿದ್ದರೆ ಸಾಕು. ■